ಸಾಮೂಹಿಕ ನಾಯಕತ್ವದಲ್ಲಿ

# ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ

## ಪತ್ರಿಕಾ ಹೇಳಿಕೆ

**ಮಾರ್ಚ್ 4 2024**
**ಮೈಸೂರು**

### ಕುಲಾಂತರಿ ತಳಿಗಳ ಕ್ಷೇತ್ರ ಪ್ರಯೋಗಕ್ಕೆ ವಿರೋಧ; ಅನುಮತಿ ಹಿಂಪಡೆಯಬೇಕು.


ರಾಜ್ಯ ಅಧ್ಯಕ್ಷೀಯ ಮಂಡಳಿಯ ಸದಸ್ಯರು

**ಪ್ರೊ. ರವಿವರ್ಮಾ ಕುಮಾರ್**
ರೈತ ಚಳವಳಿಯ ಹಿರಿಯ ಸಂಸ್ಥಾಪಕ ಸದಸ್ಯರು ಮತ್ತು ಹಿರಿಯ ನ್ಯಾಯವಾದಿಗಳು, ಬೆಂಗಳೂರು

**ಶ್ರೀಮತಿ ಅನಸೂಯಮ್ಮನವರು**
ರೈತ ಚಳವಳಿಯ ಹಿರಿಯ ಸಂಸ್ಥಾಪಕ ಸದಸ್ಯರು, ರಾಮನಗರ ಜಿಲ್ಲೆ

**ಶ್ರೀ ಕೆ ಟಿ ಗಂಗಾಧರ್**
ರೈತ ಚಳವಳಿಯ ಹಿರಿಯ ಸಂಸ್ಥಾಪಕ ಸದಸ್ಯರು, ಶಿವಮೊಗ್ಗ

**ಶ್ರೀ.ರಾಮಣ್ಣ ಕೆಂಚಳ್ಳೇರ**
ಹಿರಿಯ ರೈತ ಮುಖಂಡರು, ಹಾವೇರಿ ಜಿಲ್ಲೆ

**ಶ್ರೀಮತಿ ಚುಕ್ಕಿ ನಂಜುಂಡಸ್ವಾಮಿ**
ರೈತ ಮುಖಂಡರು, ಬೆಂಗಳೂರು


ಕುಲಾಂತರಿ ತಳಿಗಳನ್ನು ಪ್ರಯೋಗ ನಡೆಸುವ ಕುರಿತು ರಾಜ್ಯದ **ಜೈವಿಕ ತಂತ್ರಜ್ಞಾನ ಸಮನ್ವಯ ಸಮಿತಿಯು** ಫೆಬ್ರವರಿ 23ರಂದು ಸಭೆ ನಡೆಸಿದ್ದು, ರಾಜ್ಯದ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದಿದ್ದ ಈ ಸಭೆಯಲ್ಲಿ **ಬಿಟಿ ಹತ್ತಿ ಮತ್ತು ಜೋಳ** ಪ್ರಯೋಗ ನಡೆಸಲು **ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯದ**ದಲ್ಲಿ ಕುಲಾಂತರಿ ಹತ್ತಿ ಮತ್ತು ಜೋಳ ತಳಿ ಪ್ರಯೋಗ ನಡೆಸಲು **ರಾಲೀಸ್ ಇಂಡಿಯಾ ಲಿಮಿಟೆಡ್** ಗೆ ರಾಜ್ಯ ಸರ್ಕಾರವು **ನಿರಾಕ್ಷೇಪಣಾ ಪತ್ರವನ್ನು(NOC)** ನೀಡಿದೆ.

2024-26 ರ ಅವಧಿಯಲ್ಲಿ ಕುಲಾಂತರಿ ತಳಿಗಳಾದ **ಎಂಎಲ್ಎಸ್ 4301, ಎಂಎಲ್ಎಸ್ 2531** ಎರಡು ತಳಿಗಳ ಪ್ರಯೋಗ ನಡೆಸಲು ಸಭೆಯು ತೀರ್ಮಾನಿಸಿರುವುದು ಗೊತ್ತಾಗಿದೆ.

ಈ ಎರಡು ಹೊಸ ತಳಿಗಳು ಕಳೆನಾಶಕ ಮತ್ತು ಕ್ರಿಮಿನಾಶಕ ನಿರೋಧಕ (Herbicide and Pestcide Resistant) ಗುಣಗಳನ್ನು ಹೊಂದಿದ್ದು ಇಳುವರಿಯನ್ನು ಶೇಕಡ 30 ರಿಂದ 70ರಷ್ಟು ಹೆಚ್ಚಿಸಲಿದೆ ಎಂದು ಹೇಳಲಾಗಿದೆ.

ಜೈವಿಕ ತಂತ್ರಜ್ಞಾನದ ಬಗ್ಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ವೈಜ್ಞಾನಿಕ ಸಮುದಾಯದೊಳಗೇ ಸಮಾನ ಅಭಿಪ್ರಾಕ್ಕೆ ಬರಲು ಸಾಧ್ಯವಾಗಿಲ್ಲ. ಕೃಷಿಯಲ್ಲಿ ಜೈವಿಕ ತಂತ್ರಜ್ಞಾನ ಅಥವಾ ಬಿ.ಟಿ. ತಂತ್ರಜ್ಞಾನವನ್ನು ಬಳಸುವುದರಿಂದ ಪರಿಸರ, ಪ್ರಾಣಿ, ಪಕ್ಷಿ ಮತ್ತು ಮನುಷ್ಯರ ಆರೋಗ್ಯದ ಮೇಲೆ ಸರಿಪಡಿಸಲಾಗದಂತಹ ದುಷ್ಪರಿಣಾಮಗಳು ಬೀರಲಿವೆ ಎಂಬ ಆತಂಕವನ್ನು ಅಂತರಾಷ್ಟ್ರೀಯ ವಿಜ್ಞಾನಿಗಳು ಕಳೆದ ಇಪ್ಪತ್ತೈದು ವರ್ಷಗಳಿಂದ ಹೇಳುತ್ತಲೇ ಬಂದಿದ್ದಾರೆ.

**ರೈತರ ಬೀಜ ಸ್ವಾತಂತ್ರ್ಯದ ಹರಣ**
ಕಳೆದ 22 ವರ್ಷಗಳಿಂದ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಬಿ.ಟಿ. ಹತ್ತಿಯು ತನ್ನ ಏಕಸ್ವಾಮ್ಯವನ್ನು ಸ್ಥಾಪಿಸಿದ್ದು ನಮ್ಮ ಸ್ಥಳೀಯ ಅನೇಕ ಹತ್ತಿ ತಳಿಗಳು ಸಂಪೂರ್ಣವಾಗಿ ಮಾಯವಾಗಿದೆ. ರೈತರು ಬಿತ್ತನೆ ಬೀಜಕ್ಕಾಗಿ ಪ್ರತಿವರ್ಷ ಕಂಪನಿಗಳ ಮೊರೆಹೋಗುವ ಸ್ಥಿತಿ ಎದುರಾಗಿದೆ. ಇದರಿಂದ ರೈತರು ಬೀಜದ ಸ್ವಾತಂತ್ರವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ.


ವಿಳಾಸ: # ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿಯವರ ಮನೆ,
636, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿನಗರ, ಬೆಂಗಳೂರು 560098

ಫೋನ್ : 9845066156/ 9448524928 |
Email: krrsandgreenbrigade@gmail.com

ರಾಜ್ಯ ಅಧ್ಯಕ್ಷೀಯ
ಮಂಡಳಿಯ ಸದಸ್ಯರು

**ಪ್ರೊ. ರವಿವರ್ಮಾ ಕುಮಾರ್**
ರೈತ ಚಳವಳಿಯ ಹಿರಿಯ ಸಂಸ್ಥಾಪಕ
ಸದಸ್ಯರು ಮತ್ತು ಹಿರಿಯ
ನ್ಯಾಯವಾದಿಗಳು, ಬೆಂಗಳೂರು

**ಶ್ರೀಮತಿ ಅನಸೂಯಮ್ಮನವರು**
ರೈತ ಚಳವಳಿಯ ಹಿರಿಯ ಸಂಸ್ಥಾಪಕ
ಸದಸ್ಯರು, ರಾಮನಗರ ಜಿಲ್ಲೆ

**ಶ್ರೀ ಕೆ ಟಿ ಗಂಗಾಧರ್**
ರೈತ ಚಳವಳಿಯ ಹಿರಿಯ ಸಂಸ್ಥಾಪಕ
ಸದಸ್ಯರು, ಶಿವಮೊಗ್ಗ

**ಶ್ರೀ.ರಾಮಣ್ಣ ಕೆಂಚಳ್ಳೇರ**
ಹಿರಿಯ ರೈತ ಮುಖಂಡರು, ಹಾವೇರಿ ಜಿಲ್ಲೆ

**ಶ್ರೀಮತಿ ಚುಕ್ಕಿ ನಂಜುಂಡಸ್ವಾಮಿ**
ರೈತ ಮುಖಂಡರು, ಬೆಂಗಳೂರು

ಜೈವಿಕ ತಂತ್ರಜ್ಞಾನದಲ್ಲಿ ನಿಸರ್ಗದಲ್ಲಿ ನಡೆಯದೇ ಇರುವ ಎರಡು ವಿರುದ್ಧ ವಂಶವಾಹಿಗಳನ್ನು ಒಂದಕ್ಕೊಂದರ ಜೊತೆ ಕುಲಾಂತರಿಗೊಳಿಸಲಾಗುತ್ತದೆ. ಕುಲಾಂತರಿ ತಳಿಗಳು ಬಹುರಾಷ್ಟ್ರೀಯ ಕಂಪನಿಗಳ ಪಟ್ಟ ಭದ್ರ ಹಿತಾಸಕ್ತಿಯನ್ನು ಕಾಪಾಡಲು ಮತ್ತು ರೈತರನ್ನು ದಿವಾಳಿ ಎಬ್ಬಿಸಲು ತಯಾರಿಸಿರುವ ತಂತ್ರಜ್ಞಾನ.

ಈಗಾಗಲೇ ಅನೇಕ ವರದಿಗಳು ಎತ್ತಿ ತೋರಿಸಿರುವಂತೆ, ಬಿಟಿ ಹತ್ತಿಯ ಕೃಷಿಯು ರೈತರಲ್ಲಿ ಕೀಟನಾಶಕ ಬಳಕೆ ಮತ್ತು ಒಳಸುರಿ ವೆಚ್ಚದ ಪ್ರಮಾಣದಲ್ಲಿ ಗಣನೀಯ ಹೆಚ್ಚಳಕ್ಕೆ ಕಾರಣವಾಗಿದೆ. ಕರ್ನಾಟಕ ಮತ್ತು ಇಡೀ ಭಾರತದಲ್ಲಿ ಬಿಟಿ ಹತ್ತಿಯ ಬೆಳೆಯು ಗಮನಾರ್ಹ ಪ್ರಮಾಣದಲ್ಲಿ ಏರಿಕೆಯಾದ ಸಮಯದಿಂದ ಅದರ ಇಳುವರಿಯಲ್ಲಿ ಯಾವುದೇ ಗಮನಾರ್ಹ ಏರಿಕೆ ಕಂಡುಬಂದಿಲ್ಲ. ವಾಸ್ತವವಾಗಿ, ಕೆಲವು ವರದಿಗಳು ಇಳುವರಿಯಲ್ಲಿ ಕುಂಠಿತವಾಗಿದೆ ಎಂದು ಸೂಚಿಸುತ್ತವೆ. ಒಟ್ಟಾರೆಯಾಗಿ, ಬಿಟಿ ಬೆಳೆಗಳಿಂದ ರೈತರಿಗೆ ಉಪಯೋಗವಾಗುವುದಕ್ಕಿಂತ ಹೆಚ್ಚು ಹಾನಿಯಾಗಿದೆ.

ಕರ್ನಾಟಕದಲ್ಲಿ ಸಮೃದ್ಧ ಮತ್ತು ಸುಸ್ಥಿರ ಕೃಷಿ ಕ್ಷೇತ್ರದ ದೃಷ್ಟಿಕೋನವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮತ್ತು ಮನುಕುಲದ ಒಳಿತಿಗಾಗಿ ರಾಜ್ಯ ಸರ್ಕಾರವು ನೆರೆಯ ಆಂಧ್ರ ಪ್ರದೇಶ ಸರ್ಕಾರದ ಮಾದರಿಯಲ್ಲಿ ನೈಸರ್ಗಿಕ ಕೃಷಿಯನ್ನು ಹೆಚ್ಚು ಅಳವಡಿಸಿಕೊಳ್ಳುವ ನಿರೀಕ್ಷೆಯಲ್ಲಿದ್ದ ಈ ಸಮಯದಲ್ಲಿ, ಕರ್ನಾಟಕವು ಇಂತಹ ವಿಭಿನ್ನ ದಿಕ್ಕಿನಲ್ಲಿ ಹೆಜ್ಜೆ ಇಡುತ್ತಿರುವುದು ವಿಷಾಧನೀಯವಾಗಿದೆ.

ಮನುಕುಲಕ್ಕೆ ಮತ್ತು ಇಡೀ ಸಸ್ಯ ಮತ್ತು ಪ್ರಾಣಿ ಸಂಕುಲಕ್ಕೆ ಕಂಟಕವಾಗಿರುವ ಬಿ.ಟಿ. ಹತ್ತಿಯ ಮತ್ತು ಜೋಳದ ಕ್ಷೇತ್ರ ಪ್ರಯೋಗಗಳನ್ನು ನಡೆಸಲು ಅವಕಾಶ ನೀಡಬಾರದೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇವೆ.

**********

**ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಶಿಫಾರಸ್ಸುಗಳನ್ನು ಪರಿಗಣಿಸುವಾಗ ಎಚ್ಚರಿಕೆ ಇರಲಿ**

ಕೃಷಿ ಭೂಮಿಗಳ ಗುತ್ತಿಗೆಯನ್ನು ಕಾನೂನುಬದ್ಧಗೊಳಿಸುವಂತೆ **ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 (ಕೆಎಆರ್‌ಸಿ-2)** ಸರ್ಕಾರಕ್ಕೆ ಹೇಳಿದೆ. ದೇಶದ ಆಹಾರ ಸಾರ್ವಭೌಮತ್ವವನ್ನು ಕಾಪಾಡುವ ಹೊಣೆಗಾರಿಕೆ ಹೊತ್ತಿರುವ ಸರ್ಕಾರ ಮೊದಲು ಭೂಮಿ ವಂಚಿತರಿಗೆ ಭೂಮಿಯನ್ನು ಹಂಚುವ ಕೆಲಸ ಮಾಡಬೇಕು. ಕೃಷಿ ಭೂಮಿ ಸಣ್ಣ ರೈತರ ಕೈಯಲ್ಲಿ ಉಳಿದಾಗ ಮಾತ್ರ ಉತ್ಪಾದಕತೆ ಹೆಚ್ಚಲು ಸಾಧ್ಯ.

ವಿಳಾಸ: # ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿಯವರ ಮನೆ,
636, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿನಗರ, ಬೆಂಗಳೂರು 560098

ಫೋನ್ : **9845066156/ 9448524928 |**
**Email: krrsandgreenbrigade@gmail.com**

ರಾಜ್ಯ ಅಧ್ಯಕ್ಷೀಯ ಮಂಡಳಿಯ ಸದಸ್ಯರು

**ಪ್ರೊ. ರವಿವರ್ಮ ಕುಮಾರ್**
ರೈತ ಚಳವಳಿಯ ಹಿರಿಯ ಸಂಸ್ಥಾಪಕ ಸದಸ್ಯರು ಮತ್ತು ಹಿರಿಯ ನ್ಯಾಯವಾದಿಗಳು, ಬೆಂಗಳೂರು

**ಶ್ರೀಮತಿ ಅನಸೂಯಮ್ಮನವರು**
ರೈತ ಚಳವಳಿಯ ಹಿರಿಯ ಸಂಸ್ಥಾಪಕ ಸದಸ್ಯರು, ರಾಮನಗರ ಜಿಲ್ಲೆ

**ಶ್ರೀ ಕೆ ಟಿ ಗಂಗಾಧರ್**
ರೈತ ಚಳವಳಿಯ ಹಿರಿಯ ಸಂಸ್ಥಾಪಕ ಸದಸ್ಯರು, ಶಿವಮೊಗ್ಗ

**ಶ್ರೀ.ರಾಮಣ್ಣ ಕೆಂಚಳ್ಳೇರ**
ಹಿರಿಯ ರೈತ ಮುಖಂಡರು, ಹಾವೇರಿ ಜಿಲ್ಲೆ

**ಶ್ರೀಮತಿ ಚುಕ್ಕಿ ನಂಜುಂಡಸ್ವಾಮಿ**
ರೈತ ಮುಖಂಡರು, ಬೆಂಗಳೂರು

ಕರ್ನಾಟಕವು 21 ಲಕ್ಷ ಹೆಕ್ಟೇರ್ ಗಳಷ್ಟು ಬೀಳು ಭೂಮಿಯನ್ನು ಹೊಂದಿರಲು ಗುತ್ತಿಗೆ ಮೇಲಿರುವ ನಿರ್ಬಂಧಗಳು ಪ್ರಮುಖ ಕಾರಣಗಳು ಎಂದು **ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2** ಹೇಳಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಬಳಕೆಯಾಗದ ಅಥವಾ ಬೀಳು ಬಿಟ್ಟಿರುವ ಭೂಮಿಗೆ ಅನೇಕ ಕಾರಣಗಳಿವೆಯೇ ಹೊರತು ಕೇವಲ ಗುತ್ತಿಗೆ ನಿರ್ಬಂಧಗಳಷ್ಟೇ ಅಲ್ಲ. ಈ ಕಾರಣಗಳನ್ನು ಹೆಕ್ಕಿ ತೆಗೆದು ಪರಿಹಾರ ಹುಡುಕುವುದೂ ಆಯೋಗದ ಜವಾಬ್ದಾರಿಯಾಗಿದೆ.

KARC-2 **ಕರ್ನಾಟಕ ಬೆಳೆ ಉತ್ಪಾದನೆ ಮತ್ತು ಭೂ ಪುನರುಜ್ಜೀವನ ಮಸೂದೆ**ಯನ್ನೂ ಕೂಡ ರಚಿಸಿದ್ದು, ಅದನ್ನು ಸರ್ಕಾರ ಪರಿಗಣಿಸುವ ಮುನ್ನ ರೈತ ಮುಖಂಡರ ಮತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ತಜ್ಞರ ಅಭಿಪ್ರಾಯ ಪಡೆಯಬೇಕೆಂದು ಸಾಮೂಹಿಕನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕರ್ನಾಟಕ ಸರ್ಕಾರಕ್ಕೆ ಕಿವಿಮಾತು ಹೇಳಲು ಬಯಸುತ್ತದೆ.

**********

**ಕಿಸಾನ್ ಸತ್ಯಾಗ್ರಹ ಸಾಕ್ಷ್ಯಚಿತ್ರವನ್ನು ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕರ್ನಾಟಕ ಸರ್ಕಾರ ಹೆಮ್ಮೆಯಿಂದ ಪ್ರದರ್ಶಿಸಬೇಕು.**

ಎರಡು ವರ್ಷಗಳ ಹಿಂದೆ ದೆಹಲಿಯಲ್ಲಿ ನಡೆದ ರೈತರ ಐತಿಹಾಸಿಕ ಹೋರಾಟಗಳ ಬಗ್ಗೆ ರಾಷ್ಟ್ರ ಪ್ರಶಸ್ತಿ ವಿಜೇತ ಶ್ರೀ ಕೇಸರಿ ಹರವು ರವರು ನಿರ್ದೇಶಿಸಿದ್ದ ಸಾಕ್ಷ ಚಿತ್ರ **ಕಿಸಾನ್ ಸತ್ಯಾಗ್ರಹ** ವನ್ನು ಕೇಂದ್ರದ ವಾರ್ತಾ ಮತ್ತು ಪ್ರಸಾರ ಸಚಿವಾಲಯ ನಿಷೇಧ ಗೊಳಿಸಿದೆ ಎಂದು ತಿಳಿದು ಬಂದಿದೆ. ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರ ಆಯೋಜಿಸಿರುವ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆಂದು ಪಟ್ಟಿಯಲ್ಲಿದ್ದ ಈ ಸಾಕ್ಷ್ಯಚಿತ್ರವನ್ನು ಪಟ್ಟಿಯಿಂದ ಈ ಕಾರಣಕ್ಕಾಗಿ ತೆಗೆಯಲಾಗಿದೆ ಎಂದು ತಿಳಿದುಬಂದಿದ್ದು ಇದುವರೆಗೂ ನಿರ್ದೇಶಕರಿಗೆ ಅಧಿಕೃತವಾಗಿ ನಿಷೇಧದ ಹಿಂದಿರುವ ಕಾರಣಗಳನ್ನು ತಿಳಿಸಿಲ್ಲ.

ದೆಹಲಿಯಲ್ಲಿ ಹಿಂದೆ ನಡೆದ ಹೋರಾಟ ಅತ್ಯಂತ ಗಂಭೀರ ಸ್ಥಿತಿಯಲ್ಲಿರುವ ಕೃಷಿ ಕ್ಷೇತ್ರವನ್ನು, ರೈತರ ಸಂಕಷ್ಟಗಳನ್ನು, ಎತ್ತಿ ಹಿಡಿಯುವ ಮತ್ತು ತಮ್ಮ ಬದುಕುವ ಹಕ್ಕಿಗಾಗಿ ಭವಿಷ್ಯದ ಮಕ್ಕಳ ಬದುಕುವ ಹಕ್ಕಿನ ರಕ್ಷಣೆಗಾಗಿ ಮಾಡಿರುವ ಹೋರಾಟ. ಈ ಹೋರಾಟವನ್ನು ದಾಖಲಿಸಿ ಸಾಕ್ಷ ಚಿತ್ರದ ಮೂಲಕ ದಾಖಲಿಸಲು ಪ್ರಯತ್ನಿಸಿರುವ ಶ್ರೀ ಕೇಸರಿ ಹರವು ರವರ ಪ್ರಯತ್ನವನ್ನು ಕರ್ನಾಟಕ ಸರ್ಕಾರ ಹೆಮ್ಮೆಯಿಂದ ಕಾಣಬೇಕು.

ಜೊತೆಗೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಅಂತರಾಷ್ಟ್ರೀಯ ಚಲನ ಚಿತ್ರೋತ್ಸವದ ಮುಖ್ಯ ಸಭಾಂಗಣದಲ್ಲಿ **ಕಿಸಾನ್ ಸತ್ಯಾಗ್ರಹ**ದ ಪ್ರದರ್ಶನವನ್ನು ಏರ್ಪಡಿಸಿ **ಅಭಿವ್ಯಕ್ತಿ ಸ್ವಾತಂತ್ರ್ಯ**ವನ್ನು ಕಸಿದುಕೊಳ್ಳಲು ಬಿಡುವುದಿಲ್ಲ ಎಂಬ ಸಂದೇಶವನ್ನು ಕರ್ನಾಟಕ ಸರ್ಕಾರ ಕೊಡಬೇಕೆಂದು ರೈತ ಸಂಘ ಒತ್ತಾಯಿಸುತ್ತದೆ.

ವಿಳಾಸ: # ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿಯವರ ಮನೆ,
636, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿನಗರ, ಬೆಂಗಳೂರು 560098

ಫೋನ್ : **9845066156/ 9448524928 |**
**Email: krrsandgreenbrigade@gmail.com**